ದಿನಾಂಕಃ 21–04–2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿ 4 ರವರ ಪರ ವಕೀಲರಿಂದ,

1) ನಾನು 7 ನೇ ತರಗತಿ ವರೆಗೆ ವ್ಯಾಸಂಗ ಮಾಡಿರುತ್ತೇನೆ. 4 ನೇ ಪ್ರತಿವಾದಿ ನನ್ನ ಮೈದನ ಹೆಂಡತಿ. 4 ನೇ ಪ್ರತಿವಾದಿ ರವರಿಗೆ ಆಸ್ತಿಗಳು ಯಾವ ಮುಖಾಂತರ ಬಂದಿರುತ್ತದೆ ಎಂದು ನನಗೆ ಗೊತ್ತಿರುತ್ತದೆ. ನಾನು ಹಾಜರುಪಡಿಸಿರುವ ದಾಖಲಾತಿಗಳ ಬಗ್ಗೆ ನನಗೆ ಗೊತ್ತಿರುತ್ತದೆ. 1 ನೇ ಪ್ರತಿವಾದಿಗೆ ಸಾಕಷ್ಟು ಒಡವೆಗಳನ್ನು ನೀಡಿ ಮದುವೆ ಆಗಿರುತ್ತೇನೆ ಎಂದರೆ ಸರಿಯಲ್ಲ. ನನಗೆ 2000 ನೇ ಸಾಲಿನಲ್ಲಿ ಮದುವೆ ಆಗಿರುತ್ತದೆ. ನನ್ನ ಮದುವೆ ಆಗುವ ಕಾಲಕ್ಕೆ ನನ್ನ ಗಂಡ ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ಮದುವೆ ಆದ ನಂತರ ನಾನು ಮತ್ತು ನನ್ನ ಗಂಡ ಬೇರೆ ಬೇರೆಯಾಗಿ ವಾಸ ಮಾಡುತ್ತಿದ್ದೇವು ಎಂದರೆ ಸರಿಯಲ್ಲ.

2) ನನ್ನ ಗಂಡನಿಗೆ ಮಧ್ಯಪಾನ ಮಾಡುವ ಅಭ್ಯಾಸ ಇತ್ತು ಎಂದರೆ ಸರಿಯಲ್ಲ. ನನ್ನ ಗಂಡ ಆರೋಗ್ಯವಾಗಿದ್ದರು. ನನ್ನ ಗಂಡನಿಗೆ ಪ್ರತಿವಾದಿ 1 ರವರು ಸುಮಾರು ರೂ. 5 ಲಕ್ಷ ಹಣ ಆರೋಗ್ಯಕ್ಕಾಗಿ ಖರ್ಚು ಮಾಡಿದ್ದರು ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಕುಡಿತ ಅಭ್ಯಾಸ ಇರುವ ಕಾರಣ ನಾನು ನನ್ನ ಗಂಡನಿಂದ ಬೇರೆಯಾಗಿ ವಾಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಚಿಕಿತ್ಸೆ ಕೊಡಿಸುವ ಸಲುವಾಗಿ ಸಾಲ ಮಾಡಿದ್ದು, ಸದರಿ ಸಾಲವನ್ನು ತೀರಿಸುವ ಸಲುವಾಗಿ 5 ನೇ ಪ್ರತಿವಾದಿಗೆ ನಿಶಾನೆ ಪಿ–7 ರಂತೆ ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲು ವಿಚಾರಣೆಗೆ ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ